# 73ನೇ ಸಂವಿಧಾನ ತಿದ್ದುಪಡಿಯ 25ನೇ ವರ್ಷಾಚರಣೆ

## 73ನೆಯ ಸಂವಿಧಾನ ತಿದ್ದುಪಡಿ : ಗ್ರಾಮ ಗಣರಾಜ್ಯದತ್ತ ದಿಟ್ಟ ಹೆಜ್ಜೆ



– ಎಸ್. ಜನಾರ್ದನ ಮರವಂತೆ
ಪಂಚಾಯತ್ ರಾಜ್ ವಿಷಯ ತಜ್ಞರು

**ಆ**ಡಳಿತ, ಅಭಿವೃದ್ಧಿ, ಜನಕ್ಷೇಮದಂತಹ ವಿಷಯಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಶಾಸನಾತ್ಮಕ ಹೊಣೆ ಹೊಂದಿದ ಸರಕಾರವನ್ನು ಪ್ರದೇಶವೊಂದರ ವ್ಯಾಪ್ತಿಯ ಜನರು ಚುನಾವಣೆಯ ಮೂಲಕ ಪಡೆಯುವ ಮತ್ತು ಬದಲಾಯಿಸುವ ಅಧಿಕಾರ ಹೊಂದಿದ ವ್ಯವಸ್ಥೆಯನ್ನು ಸ್ಥೂಲವಾಗಿ ಗಣರಾಜ್ಯ ಎಂದು ಕರೆಯಬಹುದಾದರೆ ಅಂತಹ ವ್ಯವಸ್ಥೆ ಪಡೆದ ಗ್ರಾಮಕ್ಕೂ ಹೆಸರು ತಾತ್ವಿಕವಾಗಿಯಾದರೂ ಅನ್ವಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಅದನ್ನು ಗ್ರಾಮ ಗಣರಾಜ್ಯವೆಂದು ಕರೆಯಬಹುದೆನಿಸುತ್ತದೆ. 1992ರಲ್ಲಿ ನಮ್ಮ ಸಂಸತ್ತು ದೇಶದ ಸಂವಿಧಾನಕ್ಕೆ ತಂದ 73ನೆಯ ತಿದ್ದುಪಡಿಯು ದೇಶದಲ್ಲಿ ಅಂತಹ ಸಾವಿರಾರು ಗ್ರಾಮ ಗಣರಾಜ್ಯಗಳನ್ನು ಸೃಷ್ಟಿಸಿದೆ. ಈ ತಿದ್ದುಪಡಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಗ್ರಾಮ ಗಣರಾಜ್ಯಗಳನ್ನು ಸ್ವಯಮಾಡಳಿತ ಸರಕಾರಗಳೆಂದು ಪರಿಗಣಿಸಿರುವುದಲ್ಲದೆ, ಅದನ್ನು ಜನರೇ ನೇರಾಗಿ ಆಳಬಹುದಾದ ಸಹಭಾಗಿತ್ವ ಗಣತಂತ್ರವಾಗಿ ಮಾರ್ಪಡಿಸಿದೆ. ಇದು ದೇಶದ ಸ್ವಾತಂತ್ರ್ಯೋತ್ತರದ ಅತ್ಯಂತ ಮಹತ್ವದ ಬೆಳವಣಿಗೆ.

**ವಿಕಾಸದ ಹಾದಿ**

ಭಾರತದ ಸಂವಿಧಾನ ರೂಪಿಸುವ ಹಂತದಲ್ಲಿ ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಪಾರಂಪರಿಕವಾಗಿ ಅಸ್ತಿತ್ವದಲ್ಲಿದ್ದ, ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಶಾಸನಾತ್ಮಕ ನೆಲೆ ಪಡೆದಿದ್ದ ಮತ್ತು ರಾಷ್ಟ್ರಪಿತ ಗಾಂಧೀಜಿ ಬಲವಾಗಿ ಪ್ರತಿಪಾದಿಸುತ್ತಿದ್ದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಾವ ಸ್ವರೂಪ ಮತ್ತು ಸ್ಥಾನಮಾನದೊಂದಿಗೆ ದೇಶದ ಆಡಳಿತದ ಭಾಗವಾಗಿ ಉಳಿಸಿಕೊಳ್ಳಬೇಕು ಎಂಬ ಗಂಭೀರ ಚರ್ಚೆ ನಡೆಯಿತು. ಅಂತಿಮವಾಗಿ ಅದನ್ನು 40ನೆಯ ವಿಧಿಯಾದ ರಾಜ್ಯಾಡಳಿತದ ನಿರ್ದೇಶಕ ತತ್ವಗಳಡಿ ತಂದು, ಅನುಷ್ಠಾನಿಸುವ ವಿವೇಚನಾಧಿಕಾರವನ್ನು ರಾಜ್ಯಗಳಿಗೆ ಬಿಟ್ಟುಕೊಡಲಾಯಿತು. ಅದರ ಫಲವಾಗಿ ದೇಶದಲ್ಲಿ ರಾಜ್ಯವಾರಾಗಿ ವಿಭಿನ್ನ ಸ್ವರೂಪದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗಳು ಅಸ್ತಿತ್ವಕ್ಕೆ ಬಂದುವು. ಅವು ಅತ್ತ ಸ್ವಯಮಾಡಳಿತ ಸಂಸ್ಥೆಗಳೂ ಆಗಲಿಲ್ಲ; ಇತ್ತ ಗಾಂಧೀಜಿಯವರು ಕನಸುಕಂಡ ಗ್ರಾಮ ಸ್ವರಾಜ್ಯದ ಸನಿಹಕ್ಕೂ ಬರಲಿಲ್ಲ; ಗ್ರಾಮೀಣಾಭಿವೃದ್ಧಿಯ ವೇದಿಕೆಗಳೂ ಆಗಲಿಲ್ಲ. ಗ್ರಾಮ ಗಣರಾಜ್ಯವಾಗುವ ಮಾತಂತೂ ದೂರವೇ ಉಳಿಯಿತು.

* ಸಮುದಾಯ ಅಭಿವೃದ್ಧಿ ಯೋಜನೆ : ಭಾರತ ಸರಕಾರ 1952ರಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಆರಂಭಿಸಿತು. ಆದರೆ ಅದು ನಿರೀಕ್ಷಿತ ಯಶ ಸಾಧಿಸಲಿಲ್ಲ. ಅದರ ಕಾರಣಗಳ ಅಧ್ಯಯನ ನಡೆಸಲು ಸರಕಾರವು ಸಂಸದ ಬಲವಂತರಾಯ್ ಮೆಹತಾ ನೇತೃತ್ವದ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸಮುದಾಯ ಅಭಿವೃದ್ಧಿ ಯೋಜನೆ ನಿರೀಕ್ಷಿತ ಫಲ ನೀಡದಿರುವುದಕ್ಕೆ ಅದರಲ್ಲಿ ಜನಸಹಭಾಗಿತ್ವಕ್ಕೆ ಅವಕಾಶವಿಲ್ಲದಿದ್ದುದು ಕಾರಣ; ಅದನ್ನು ಖಾತರಿಗೊಳಿಸಲು ಕೆಲವು ಪ್ರಜಾತಾಂತ್ರಿಕ ಸಾಂಸ್ಥಿಕ ವ್ಯವಸ್ಥೆಯನ್ನು ಸೃಜಿಸುವುದು ಅಗತ್ಯ ಎಂದು ವರದಿ ನೀಡಿತು. ಈ ವರದಿಯು ರಾಜ್ಯಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸ್ಥಾಪನೆಗೆ ವೇಗ ನೀಡಿತು. 1959–60ರ ಹೊತ್ತಿಗೆ ಎಲ್ಲ ರಾಜ್ಯಗಳು ಗ್ರಾಮ ಪಂಚಾಯಿತಿ, ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತು ಎಂಬ ಮೂರು ಸ್ತರಗಳಿಗೆ ಅವಕಾಶ ಕಲ್ಪಿಸುವ ಪಂಚಾಯತ್ ರಾಜ್ ಕಾಯಿದೆಯನ್ನು ಜಾರಿಗೊಳಿಸಿದುವು. ಆದರೆ ಈ ಸ್ತರಗಳ ಅಧಿಕಾರ, ಪ್ರಾತಿನಿಧ್ಯದ ಸ್ವರೂಪ, ನಡುವಿನ ಸಂಬಂಧಗಳ ವಿಚಾರದಲ್ಲಿ ರಾಜ್ಯ ರಾಜ್ಯಗಳ ನಡುವೆ ಅಂತರವಿತ್ತು.

* ಮೂರು ಅವಧಿಗಳು : ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚಾಯತ್ ರಾಜ್ ಇತಿಹಾಸವನ್ನು ಮೂರು ಅವಧಿಗಳಾಗಿ ಪರಿಗಣಿಸಲಾಗುತ್ತದೆ. ಅವುಗಳೆಂದರೆ 1959ರಿಂದ 1964ರ ವರೆಗಿನ ಆರೋಹಣ ಕಾಲ, 1965ರಿಂದ 1969ರ ವರೆಗಿನ ಸ್ಥಾಗಿತ್ಯದ ಕಾಲ ಮತ್ತು 1969ರಿಂದ 1977ರ ವರೆಗಿನ ಅವರೋಹಣ ಕಾಲ. ಎರಡು ಮತ್ತು ಮೂರನೆಯ ಅವಧಿಗಳ ಹೆಸರೇ ಸೂಚಿಸುವಂತೆ ಆ ಕಾಲದ ಹಲವು ಬೆಳವಣಿಗೆಗಳು ಈ ಸಂಸ್ಥೆಗಳ ಉಪೇಕ್ಷೆಗೆ ಕಾರಣವಾದುವು. ಹಲವು ರಾಜ್ಯಗಳಲ್ಲಿ ಅಭಿವೃದ್ಧಿ ಯೋಜನೆ ರೂಪಿಸಿ, ಅನುಷ್ಠಾನಿಸುವ ಅವಕಾಶವನ್ನು ಇವುಗಳಿಗೆ ನೀಡಲಿಲ್ಲ. ಗ್ರಾಮೀಣಾಭಿವೃದ್ಧಿಯ ಉದ್ದೇಶ ಹೊಂದಿದ್ದ ಪ್ರಮುಖ ಯೋಜನೆಗಳನ್ನು ಇವುಗಳ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು.

* ಅಶೋಕ್ ಮೆಹತಾ ವರದಿ : 1977ರಲ್ಲಿ ನೇಮಕಗೊಂಡ ಅಶೋಕ್ ಮೆಹತಾ ಸಮಿತಿ ಪಂಚಾಯತ್ ರಾಜ್ ಪರಿಕಲ್ಪನೆ ಮತ್ತು ಪರಿಪಾಠಗಳಿಗೆ ಹೊಸ ದಿಕ್ಕು ತೋರಿತು; ಪಂಚಾಯತ್ ರಾಜ್ ವ್ಯವಸ್ಥೆಯು ಪ್ರಜಾತಾಂತ್ರಿಕ ಪ್ರಗತಿಯ ವಿಧಾನದತ್ತ ಹೊರಳಬೇಕೆಂದು ಪ್ರತಿಪಾದಿಸಿತು. ಈ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾ ಪರಿಷತ್ತು, ತಾಲೂಕು ಸಮಿತಿ ಮತ್ತು ಮಂಡಲ ಪಂಚಾಯಿತಿಯಿಂದ ಕೂಡಿದ ಒಂದು ಸಂರಚನೆಯನ್ನು ಶಿಫಾರಸುಮಾಡಿತು. ಗರಿಷ್ಠ ಆಡಳಿತಾತ್ಮಕ ಬೆಂಬಲ ಮತ್ತು ಯೋಜನಾ ಪರಿಣತಿಯನ್ನು ಹೊಂದಲು ಸಾಧ್ಯವಾಗುವಂತೆ ಜಿಲ್ಲಾ ಪರಿಷತ್ತು ರಾಜ್ಯದ ನಂತರದ ವಿಕೇಂದ್ರೀಕೃತ ವ್ಯವಸ್ಥೆಯಾಗಿರಬೇಕು ಎಂದು ಹೇಳಿತು. ಪಂಚಾಯತ್ ರಾಜ್ ವ್ಯವಸ್ಥೆಯು ಸಂವಿಧಾನ ಬದ್ಧವಾಗಬೇಕು ಮತ್ತು ಅದರಲ್ಲಿ ರಾಜಕೀಯ ಪಕ್ಷಗಳು ತಮ್ಮ ಚಿಹ್ನೆಯೊಂದಿಗೆ ಸ್ಪರ್ಧಿಸುವ ಅವಕಾಶವಿರಬೇಕು ಎಂದು ಸೂಚಿಸಿತು.

ದೇಶದ ಕೆಲವು ರಾಜ್ಯಗಳು ಅಶೋಕ ಮೆಹತಾ ಸಮಿತಿಯ ಶಿಫಾರಸುಗಳನ್ನು ಅಳವಡಿಸಿಕೊಂಡುವು.

ಈ ಶಿಫಾರಸುಗಳನ್ನು ಕರ್ನಾಟಕ ಅತ್ಯಂತ ಗಂಭೀರವಾಗಿ ಅನುಷ್ಠಾನಿಸುವ ಮೂಲಕ ಅದು ದೇಶಕ್ಕೆ

ಮಾದರಿ ಎನಿಸಿದುದು ಮತ್ತು ಆ ಕಾರಣಕ್ಕೆ ಕೇಂದ್ರ ಮತ್ತು ಅನ್ಯ ರಾಜ್ಯಗಳ ಗಮನ ಸೆಳೆದುದು ಈಗ

**ಇತಿಹಾಸ.**

* ಸಿಂಘ್ವಿ ಸಮಿತಿ : ಪಂಚಾಯತ್ ರಾಜ್ ವ್ಯವಸ್ಥೆಯ ಸಶಕ್ತೀಕರಣಕ್ಕೆ ಮಾರ್ಗೋಪಾಯಗಳನ್ನು ಸೂಚಿಸಲು 1985ರಲ್ಲಿ ಜಿ. ವಿ. ಕೆ. ರಾವ್ ಸಮಿತಿ ಮತ್ತು 1986ರರಲ್ಲಿ ಎಲ್. ಎಂ. ಸಿಂಘ್ವಿ ಸಮಿತಿಗಳನ್ನು ನೇಮಿಸಲಾಯಿತು. ಮೊದಲ ಸಮಿತಿ ಜಿಲ್ಲೆಯನ್ನು ಯೋಜನೆಯ ಮೂಲ ಘಟಕವಾಗಿ ಪರಿಗಣಿಸಬೇಕು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಕಾಲಿಕವಾಗಿ ಚುನಾವಣೆ ನಡೆಸಬೇಕು ಎಂದು ಹೇಳಿದರೆ ಸಿಂಘ್ವಿ ಸಮಿತಿ ವ್ಯವಸ್ಥೆಯು ಹೆಚ್ಚು ಪರಿಣಾಮಕಾರಿಯಾಗುವಂತೆ ಅಧಿಕ ಹಣಕಾಸಿನ ಬೆಂಬಲ ನೀಡಬೇಕೆಂದು ಹೇಳಿದುದಲ್ಲದೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಂವಿಧಾನಬದ್ಧಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕೆಂದು ಸಲಹೆ ನೀಡಿತು.

* ಸಾಂವಿಧಾನಿಕ ಬೆಂಬಲದತ್ತ : ಸಂವಿಧಾನ ತಿದ್ದುಪಡಿಯ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಗೆ ಸಾಂವಿಧಾನಿಕ ಅಸ್ತಿತ್ವ ಕಲ್ಪಿಸುವ ವಿಫಲ ಪ್ರಯತ್ನಗಳು 1989ರಲ್ಲಿ ಮತ್ತು 1990ರಲ್ಲಿ ನಡೆದುವು. 1991ರಲ್ಲಿ ಮಂಡನೆಯಾದ ತಿದ್ದುಪಡಿಗಳು ಆಯ್ಕೆ ಸಮಿತಿಯ ಪರಿಶೀಲನೆಗೆ ಒಳಗಾಗಿ 1992ರ ಡಿಸೆಂಬರ್ 22ರಂದು ಲೋಕಸಭೆಯ ಮತ್ತು ಅದರ ಮರುದಿನ ರಾಜ್ಯಸಭೆಯ ಒಪ್ಪಿಗೆ ಪಡೆದು 73ನೆಯ ಸಂವಿಧಾನ ತಿದ್ದುಪಡಿಯಾಗಿ ಹೊರಹೊಮ್ಮಿದುವು. ಅವು 1993ರ ಏಪ್ರಿಲ್ 20ರಂದು ರಾಷ್ಟ್ರಪತಿಗಳ ಅಂಕಿತ ಪಡೆದು, ಏಪ್ರಿಲ್ 24ರಂದು ಜಾರಿಯಾಯಿತು. ಅದರಂತೆ ಎಲ್ಲ ರಾಜ್ಯಗಳು ಮೂರು ಸ್ತರಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವುದು ಕಡ್ಡಾಯವೆನಿಸಿತು.

**73ನೆಯ ಸಾಂವಿಧಾನ ತಿದ್ದುಪಡಿ**

ಭಾರತದ ಸಂವಿಧಾನಕ್ಕೆ ಮಾಡಲಾದ 73ನೆಯ ತಿದ್ದುಪಡಿಯು ಪಂಚಾಯತ್ ರಾಜ್ ವ್ಯವಸ್ಥೆಯನ್ನು



ದೇಶವ್ಯಾಪಿಯಾಗಿ ಕಡ್ಡಾಯಗೊಳಿಸುವ, ಅದಕ್ಕೆ ಸ್ಥಳೀಯ ಸ್ವಯಮಾಡಳಿತ ಸರಕಾರದ ಸ್ವರೂಪ ನೀಡುವ ಅದನ್ನು ಜನಸಹಭಾಗಿತ್ವದ ನೇರ ಆಡಳಿತವೆಂಬ ಹಿರಿಮೆಗೆ ಒಳಪಡಿಸುವ ಮಹತ್ವದ ಮತ್ತು ಚಾರಿತ್ರಿಕ ಹೆಜ್ಜೆಯೆನಿಸಿತು. ಜಮ್ಮು ಕಾಶ್ಮೀರವನ್ನು ಹೊರತು ಪಡಿಸಿ ಉಳಿದೆಲ್ಲ ರಾಜ್ಯಗಳಲ್ಲಿ ಗ್ರಾಮ, ಮಧ್ಯಂತರ ಮತ್ತು ಜಿಲ್ಲಾ ಮಟ್ಟ ಸೇರಿ ಮೂರು ಸ್ತರಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಧಾನ ಮಂಡಲ ಸ್ವೀಕರಿಸುವ ಶಾಸನದ ಮೂಲಕ ಅನುಷ್ಠಾನಿಸುವುದನ್ನು ಕಡ್ಡಾಯೊಳಿಸಿತು. ಇಪ್ಪತ್ತು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ರಾಜ್ಯಗಳಲ್ಲಿ ಮಧ್ಯಂತರ ಪಂಚಾಯಿತಿ ಬೇಕಿಲ್ಲ ಎಂದಿತು. ಈ ತಿದ್ದುಪಡಿಯಿಂದಾಗಿ 243 ಮತ್ತು 243ಎಯಿಂದ 243ಒ ವರೆಗಿನ ಪ್ರಕರಣಗಳನ್ನು ಒಳಗೊಂಡ 9ನೆಯ ಭಾಗ ಮತ್ತು 243 ಜಿ ಪ್ರಕರಣದಂತೆ ರಾಜ್ಯಗಳು ಪಂಚಾಯಿತಿಗಳಿಗೆ ವರ್ಗಾಯಿಸಬಹುದಾದ ಅಧಿಕಾರ ಮತ್ತು ಹೊಣೆಗಳ ಪಟ್ಟಿಯನ್ನು ಒಳಗೊಂಡ 11ನೆಯ ಅನುಸೂಚಿ ಸಂವಿಧಾನಕ್ಕೆ ಹೊಸದಾಗಿ ಸೇರ್ಪಡೆಯಾದುವು.

ತಿದ್ದುಪಡಿಯು ವಿವಿಧ ಪ್ರಕರಣಗಳು ಪಂಚಾಯತ್ ರಾಜ್ ವ್ಯವಸ್ಥೆಯ ಕೆಲವು ಅಂಶಗಳನ್ನು ಕಡ್ಡಾಯಗೊಳಿಸಿದುವು; ಕೆಲವು ಅಂಶಗಳನ್ನು ರಾಜ್ಯ ಶಾಸನ ಸಭೆಯ ವಿವೇಚನೆಗೆ ಬಿಟ್ಟುಕೊಟ್ಟವು. ಈ ಎರಡು ವಿಧದ ಅವಕಾಶಗಳನ್ನು ಪ್ರತ್ಯೇಕವಾಗಿ ನೋಡುವುದರಿಂದ ತಿದ್ದುಪಡಿಯ ಹೂರಣವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ತಿದ್ದುಪಡಿಯನ್ವಯ ರಾಜ್ಯದ ಶಾಸನ ಅಳವಡಿಸಿಕೊಳ್ಳಬೇಕಾದ ಕಡ್ಡಾಯ ವಿಧಿಗಳು :

1. ಗ್ರಾಮಸಭೆ 2. ಮೂರು ಸ್ತರಗಳ ಪಂಚಾಯಿತಿ ವ್ಯವಸ್ಥೆ 3. ಪ್ರತಿನಿಧಿಗಳ ಆಯ್ಕೆಗೆ ನೇರ ಚುನಾವಣೆ 4. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಪ್ರಮಾಣಾನುಗತ ಪ್ರಾತಿನಿಧ್ಯ 5. ಪ್ರತಿ ಮೀಸಲಾತಿ ವಿಭಾಗದಲ್ಲಿ ಮಹಿಳಾ ಪ್ರಾತಿನಿಧ್ಯ 6 ಅಧ್ಯಕ್ಷ ಹುದ್ದೆಯಲ್ಲಿ ಪ್ರತಿ ಮೀಸಲಾತಿ ವಿಭಾಗಕ್ಕೆ ಮತ್ತು ಮಹಿಳೆಯರಿಗೆ ಮೀಸಲಾತಿ 7. ಐದು ವರ್ಷಗಳ ಅಧಿಕಾರಾವಧಿ 8. ಅವಧಿಗೆ ಮುನ್ನ ಮತ್ತು ವಿಸರ್ಜನೆಯಾದ ಸಂದರ್ಭದಲ್ಲಿ ಆರು ತಿಂಗಳೊಳಗೆ ಚುನಾವಣೆ 9. ಸದಸ್ಯರ ಅನರ್ಹತೆ ನಿಗದಿ 10. ರಾಜ್ಯ ಹಣಕಾಸು ಆಯೋಗ ರಚನೆ ಮತ್ತು ಅದರ ಕಾರ್ಯವಿಧಾನ 11. ರಾಜ್ಯ ಚುನಾವಣಾ ಆಯೋಗದ ರಚನೆ, 13. ಸದಸ್ಯರ ಅವಧಿ, ಪದಚ್ಯುತಿ, ಹೊಣೆ ಮತ್ತು ಕಾರ್ಯವಿಧಾನ.

ತಿದ್ದುಪಡಿಯನ್ವಯ ರಾಜ್ಯದ ಶಾಸನಾಧಿಕಾರದ ವಿವೇಚನೆಗೆ ಬಿಡಲಾದ ವಿಧಿಗಳು :

1. ಗ್ರಾಮಸಭೆಯ ಅಧಿಕಾರ ಮತ್ತು ಪ್ರಕಾರ್ಯಗಳು 2. ಪಂಚಾಯಿತಿಗಳ ಸಂರಚನೆ 3. ಕೆಳಸ್ತರದ ಅಧ್ಯಕ್ಷರಿಗೆ ಮೇಲಿನ ಸ್ತರದಲ್ಲಿ ಮತ್ತು ವಿಧಾನ ಮಂಡಲದ ಮತ್ತು ಸಂಸತ್ತಿನ ಸದಸ್ಯರಿಗೆ ಮಧ್ಯಂತರ ಮತ್ತು ಜಿಲ್ಲಾ ಸ್ತರದಲ್ಲಿ ಪ್ರಾತಿನಿಧ್ಯ ಕಲ್ಪಿಸುವಿಕೆ 4. ಪಂಚಾಯಿತಿಗಳ ಅಧ್ಯಕ್ಷರ ಆಯ್ಕೆ ವಿಧಾನ 5. ಹಿಂದುಳಿದ ವರ್ಗಗಳಿಗೆ ಮೀಸಲಾತಿ 6 ಪಂಚಾಯಿತಿಗಳ ಅಧಿಕಾರ ಮತ್ತು ಪ್ರಕಾರ್ಯಗಳು 7. ತೆರಿಗೆ, ದರ, ಶುಲ್ಕ ಹೊರಿಸುವಿಕೆ, ವಿತರಣೆ, ಅನುದಾನ ವರ್ಗಾವಣೆ, ನಿಧಿ ನಿರ್ವಹಣೆ 8. ಪಂಚಾಯಿತಿಗಳ ಲೆಕ್ಕ ನಿರ್ವಹಣೆ ಮತ್ತು ಪರಿಶೋಧನೆ.

**ಅಧಿಕಾರ ಮತ್ತು ಪ್ರಕಾರ್ಯಗಳು :**

ರಾಜ್ಯ ಶಾಸನಾಂಗವು ಪಂಚಾಯಿತಿಗಳಿಗೆ ವರ್ಗಾಯಿಸಬಹುದಾದ ಅಧಿಕಾರ ಮತ್ತು ಪ್ರಕಾರ್ಯಗಳನ್ನು ತಿದ್ದುಪಡಿಯು ಸಂವಿಧಾನಕ್ಕೆ ಸೇರಿಸಿದ 11ನೆಯ ಅನುಸೂಚಿಯಲ್ಲಿ ಪಟ್ಟಿಮಾಡಲಾಗಿದೆ. ಅವು ಮುಂದಿನಂತಿವೆ : 1. ಕೃಷಿ ಮತ್ತು ಅದರ ವಿಸ್ತರಣೆ 2. ಭೂ ಅಭಿವೃದ್ಧಿ, ಭೂಸುಧಾರಣೆ ಅನುಷ್ಠಾನ, ಭೂ ಕ್ರೋಢೀಕರಣ ಮತ್ತು ಭೂ ಸಂರಕ್ಷಣೆ 3. ಕಿರು ನೀರಾವರಿ, ನೀರು ನಿರ್ವಹಣೆ, ಜಲಾನಯನ ಅಭಿವೃದ್ಧಿ 4. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿಸಾಕಣೆ 5. ಮೀನುಗಾರಿಕೆ 6. ಸಾಮಾಜಿಕ ಅರಣ್ಯ ಮತ್ತು ನೆಡುತೋಪು 7. ಕಿರು ಅರಣ್ಯ ಉತ್ಪನ್ನ 8. ಸಣ್ಣ ಕೈಗಾರಿಕೆ ಮತ್ತು ಆಹಾರ ಸಂಸ್ಕರಣೆ 9. ಖಾದಿ, ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆ 10. ಗ್ರಾಮೀಣ ವಸತಿ 11. ಕುಡಿಯುವ ನೀರು 12. ಉರುವಲು ಮತ್ತು ಮೇವು 13. ರಸ್ತೆ, ಮೋರಿ, ಸೇತುವೆ, ಕಡವು, ಜಲಮಾರ್ಗ ಮತ್ತು ಅನ್ಯ ಸಂಪರ್ಕ ವ್ಯವಸ್ಥೆ 14. ವಿದ್ಯುತ್ ವಿತರಣೆಯೂ ಸೇರಿದಂತೆ ಗ್ರಾಮೀಣ ವಿದ್ಯುದೀಕರಣ 15. ಅಸಾಂಪ್ರದಾಯಿಕ ಇಂಧನ ಮೂಲಗಳು 16 ಬಡತನ ನಿವಾರಣಾ ಕಾರ್ಯಕ್ರಮಗಳು 17. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ 18. ತಾಂತ್ರಿಕ ತರಬೇತಿ ಮತ್ತು ವೃತ್ತಿಪರ ಶಿಕ್ಷಣ 19. ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ 20. ಪುಸ್ತಕಾಲಯ 21. ಸಾಂಸ್ಕೃತಿಕ ಕಾರ್ಯಕ್ರಮಗಳು 22. ಮಾರುಕಟ್ಟೆಗಳು ಮತ್ತು ಜಾತ್ರೆಗಳು 23. ಆಸ್ಪತ್ರೆ, ಚಿಕಿತ್ಸಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಆರೋಗ್ಯ ಮತ್ತು ನೈರ್ಮಲ್ಯ 24. ಕುಟುಂಬ ಕಲ್ಯಾಣ 25. ಮಹಿಳಾ ಮತ್ತು ಮಕ್ಕಳ ಕಲ್ಯಾಣ 26. ವಿಕಲ ಚೇತನರ ಮತ್ತು ಬುದ್ಧಿಮಾಂದ್ಯರ ಕಲ್ಯಾಣ ಸೇರಿದಂತೆ ಸಮಾಜ ಕಲ್ಯಾಣ 27. ಪ್ರಮುಖವಾಗಿ ಪರಿಶಿಷ್ಟ ಜಾತಿ, ಪಂಗಡವೂ ಸೇರಿದಂತೆ ದುರ್ಬಲ ವರ್ಗದ ಕಲ್ಯಾಣ 28. ಸಾರ್ವಜನಿಕ ವಿತರಣಾ ವ್ಯವಸ್ಥೆ 29. ಸಮುದಾಯ ಆಸ್ತಿಯ ನಿರ್ವಹಣೆ.

**ತಿದ್ದುಪಡಿ ವಿಧಿಸಿದ ಮಿತಿ :**

ಸಂವಿಧಾನದ 73ನೆಯ ತಿದ್ದುಪಡಿಯನ್ನು ಅಧಿಕಾರ ವಿಕೇಂದ್ರೀರಣ ಮತ್ತು ಸಹಭಾಗಿತ್ವ ಜನತಂತ್ರದತ್ತ ದೇಶ ಇರಿಸಿದ ಒಂದು ಪ್ರಮುಖ ಹೆಜ್ಜೆ ಎಂದು ಬಣ್ಣಿಸಲಾಗುತ್ತಿದೆ. ಅದರ ಆಶಯ ಮತ್ತು ಪಂಚಾಯತ್ ರಾಜ್ಯ ವ್ಯವಸ್ಥೆಗೆ ಅದು ಕಲ್ಪಿಸಿದ ಶಾಶ್ವತತೆ, ನಿರಂತರತೆಯ ಕಾರಣದಿಂದ ಅದಕ್ಕೆ ಅಂತಹ ಬಣ್ಣನೆ ಪ್ರಾಪ್ತವಾಗಿದೆ. ಅದರೆ ಅದನ್ನು ಸಂಸತ್ತು ಮತ್ತು ಕೇಂದ್ರ ಸರಕಾರ ರಾಜ್ಯ ವಿಧಾನ ಮಂಡಲ ಮತ್ತು ರಾಜ್ಯ ಸರಕಾರಗಳೊಂದಿಗೆ ಮಾಡಿಕೊಂಡ ಒಂದು ಹೊಂದಾಣಿಕೆ ಎಂದು ಪರಿಗಣಿಸಲೂ ಸಾಕಷ್ಟು ನಿದರ್ಶನಗಳು ಅದರಲ್ಲಿವೆ. ಯಾವುದರಿಂದ ರಾಜ್ಯಗಳ ಅಧಿಕಾರ ಕುಂಠಿತವಾಗುವುದಿಲ್ಲವೋ ಅಂತಹ ಅವಕಾಶಗಳನ್ನು ತಿದ್ದುಪಡಿ ಕಡ್ಡಾಯಗೊಳಿಸಿದರೆ, ಯಾವುದರಿಂದ ರಾಜ್ಯ ವಿಧಾನ ಮಂಡಲದ, ಶಾಸಕರ ಮತ್ತು ರಾಜ್ಯದ ಆಡಳಿತ ವ್ಯವಸ್ಥೆಯ ಅಧಿಕಾರ ಕುಂಠಿತವಾಗುತ್ತದೋ ಅಂತಹ ಅವಕಾಶಗಳನ್ನು ಅದು ರಾಜ್ಯ ಶಾಸನಾಂಗದ ವಿವೇಚನೆಗೆ ಬಿಟ್ಟಿದೆ. ಜನಾಂದೋಲನ ಮತ್ತು ಜನಾಭಿಪ್ರಾಯ ವಿಕೇಂದ್ರೀಕರಣದ ಪರವಾಗಿರುವ ಮತ್ತು ಶಾಸನ ಸಭೆ ಅದರತ್ತ ಒಲವು ಮತ್ತು ಬದ್ಧತೆ ಹೊಂದಿರುವ ರಾಜ್ಯಗಳಲ್ಲಿ ಪಂಚಾಯತ್ ರಾಜ್ ಹೆಚ್ಚು ಪರಿಣಾಮಕಾರಿಯಾಗಿರುವುದನ್ನು ಮತ್ತು ಅವಿಲ್ಲದ ರಾಜ್ಯಗಳಲ್ಲಿ ಪಂಚಾಯತ್ ರಾಜ್ ಎಡರು ತೊಡರುಗಳ ನಡುವೆ ಸಾಗುತ್ತಿರುವುದನ್ನು ಕಾಣಬಹುದು. ಅಂತಿಮ ವಿಶ್ಲೇಷಣೆಯಲ್ಲಿ ಸಂವಿಧಾನದ ತಿದ್ದುಪಡಿಗಳು ಗ್ರಾಮ ಗಣರಾಜ್ಯದ ದೃಷ್ಟಿಯಿಂದ ಗುಣ ಮತ್ತು ಅವಗುಣಗಳ ಮಿಶ್ರಣ ಎನ್ನಬಹುದು.

ಸಿಂಹಾವಲೋಕನಕ್ಕೆ ಸಕಾಲ : ರಜತ ವರ್ಷದ ಮೂಲಕ ಹಾದುಹೋಗುತ್ತಿರುವ 73ನೆಯ ತಿದ್ದುಪಡಿಗಳ ಕುರಿತು ಮರು ಚಿಂತನೆ ನಡೆಸಲು ಇದು ಸಕಲ. ಅಂತಹ ಕೆಲಸ 23 ಮತ್ತು 24ರಂದು ಉಡುಪಿಯಲ್ಲಿ ನಡೆಯುತ್ತಿರುವುದು ಹರ್ಷ ತಂದಿದೆ. ಇಲ್ಲಿನ ಚಿಂತನ ಮಂಥನದಲ್ಲಿ ಗಮನ ಹರಿಯಬೇಕಾಗಿರುವುದು ತಿದ್ದುಪಡಿಯ ಫಲವಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಗುಣಾವಗುಣಗಳ ಕಡೆಗೆ. ತಿದ್ದುಪಡಿಗೆ ಇನ್ನಷ್ಟು ತಿದ್ದುಪಡಿ ಬೇಕೆಂದರೆ ಇನ್ನೊಮ್ಮೆ ಅದು ಕ್ಲಿಷ್ಟಕರ ಪ್ರಕ್ರಿಯೆ ಎದುರಿಸಬೇಕು. ರಾಜ್ಯಗಳು ಮನಸ್ಸು ಮಾಡಿದರೆ ಈಗಿರುವ ಸಾಂವಿಧಾನಿಕ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಗ್ರಾಮ ಗಣರಾಜ್ಯಗಳನ್ನು ಅಸ್ತಿತ್ವಕ್ಕೆ ತರಬಹುದೆನ್ನುವುದಕ್ಕೆ ಕೆಲವು ನಿದರ್ಶನಗಳು ಸಿಗುತ್ತವೆ. ಆ ನಿಟ್ಟಿನಲ್ಲಿ ರಾಜ್ಯಗಳ ಮೇಲೆ ಪ್ರಭಾವ ಬೀರುವ ಮೂಲಕವೂ ಆಶಯ ಸಾಧಿಸಿಕೊಳ್ಳಲು ಸಾಧ್ಯವಿದೆ. ಇದು ಎರಡರಲ್ಲಿ ಸುಲಭದ ಮಾರ್ಗ. ಆಯ್ಕೆ ಮುಕ್ತವಾಗಿದೆ.

---

## ‘ಆಡಳಿತ ವಿಕೇಂದ್ರೀಕರಣ ಹಾಗೂ ಅಭಿವೃದ್ಧಿ’



– ಡಾ. ಕೃಷ್ಣ ಕೊತಾಯ
ಸಂಯೋಜಕರು, ಪೂರ್ಣಪ್ರಜ್ಞ ಸಂಶೋಧನಾ ಹಾಗೂ ಅಭಿವೃದ್ಧಿ ಕೇಂದ್ರ, ಉಡುಪಿ

**ಭಾ**ರತದಂತಹ ಅತಿ ದೊಡ್ಡ ದೇಶದಲ್ಲಿ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಿಂದ ಅಭಿವೃದ್ಧಿ ಅಸಾಧ್ಯ. ಸುಮಾರು 6.5 ಲಕ್ಷ ಹಳ್ಳಿಗಳಿಂದೊಡಗೂಡಿದ ಭಾರತದ ಗ್ರಾಮೀಣ ಪುನರುತ್ಥಾನ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಿಂದ ಮಾತ್ರ ಸಾಧ್ಯ.

ಅಂತೆಯೇ ನಮ್ಮಲ್ಲಿ ಐದು ‘ಸ್ಥರದ’ ಸರ್ಕಾರಗಳನ್ನು ಕಾಣುತ್ತೇವೆ. (ಕೇಂದ್ರ, ರಾಜ್ಯ, ಜಿಲ್ಲೆ, ತಾಲೂಕು, ಗ್ರಾಮ). ಇವೆಲ್ಲವೂ ಸ್ವತಂತ್ರ ಸರ್ಕಾರಗಳು. ಜಿಲ್ಲಾ, ತಾಲೂಕು ಹಾಗೂ ಗ್ರಾಮ ಮಟ್ಟದ ಸರ್ಕಾರಗಳನ್ನು ‘ಸ್ಥಳೀಯ ಸರ್ಕಾರ’ಗಳೆಂದು ಗುರುತಿಸಲಾಗಿದೆ. ಗ್ರಾಮ ಮಟ್ಟದಲ್ಲಿರುವ ‘ಗ್ರಾಮ ಪಂಚಾಯತಿ’ ಎಲ್ಲಾ ಸರ್ಕಾರಗಳ ಬಹಳಷ್ಟು ಅಭಿವೃದ್ಧಿ ಕಾರ್ಯಕ್ರಮಗಳು ಅನಾವರಣಗೊಳ್ಳುವ ‘ರಂಗಸ್ಥಳ’. ಅಂತೆಯೇ, ಗ್ರಾಮ ಪಂಚಾಯತಿ ಇಡೀ ಆಡಳಿತ ವ್ಯವಸ್ಥೆಯ ಅಸ್ತಿಭಾರ.

**ವಿಕೇಂದ್ರೀಕರಣದ ಮಹತ್ವ :–**

* ಯಾವುದೇ ಒಂದು ಚಟುವಟಿಕೆ/ಯೋಜನೆ ಯಾವ ‘ಸ್ಥರ’ದಲ್ಲಿ ತ್ವರಿತವಾಗಿ ಹಾಗೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವೋ, ಆ ಯೋಜನೆಯನ್ನು ಸಂಬಂಧಿತ ‘ಸ್ಥರ’ ಅನುಷ್ಠಾನಗೊಳಿಸಬೇಕು. ಉದಾಹರಣೆಗೆ, ಒಂದು ಗ್ರಾಮ ಪಂಚಾಯತಿ ಏನೆಲ್ಲಾ ಚಟುವಟಿಕಗಳನ್ನು ಮಾಡಲು ಸಾಧ್ಯವೋ, ಆ ಕೆಲಸಗಳಲ್ಲಿ ಇತರ ‘ಸ್ಥರ’ಗಳ ಹಸ್ತಕ್ಷೇಪ ಸಲ್ಲದು.

* ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸಂಬಂಧಿತ ‘ಸ್ಥರ’ಗಳ ಪಾತ್ರದ ಸ್ಪಷ್ಟತೆ ಇರುತ್ತದೆ.

* ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ‘ಜನ–ಸಹಭಾಗಿತ್ವ’ ಅತ್ಯಂತ ಮಹತ್ವದ್ದಾಗಿರುತ್ತದೆ.

* ಹೊಣೆಗಾರಿಕೆ, ಜವಾಬ್ದಾರಿ, ಉತ್ತರದಾಯಿತ್ವ ವಿಕೇಂದ್ರೀಕರಣದ ಆಶಯಗಳು.

* ಪಾರದರ್ಶಕತೆಗೆ ವಿಕೇಂದ್ರೀಕರಣದಲ್ಲಿ ಮಹತ್ವವಿರುತ್ತದೆ.

ಈ ತೆರನಾದ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಯೋಜನೆಗಳು ರೂಪುಗೊಂಡು, ಅನುಷ್ಠಾನಗೊಳ್ಳುವ ಜೊತೆಗೆ, ಸಾಮಾಜಿಕ ನ್ಯಾಯದ ಒದಗಣೆ ಸಾಧ್ಯವಾಗಬೇಕು. ಗ್ರಾಮೀಣ ಅಭಿವೃದ್ಧಿಗೂ ಆಡಳಿತ ವಿಕೇಂದ್ರೀಕರಣಕ್ಕೂ ಅತ್ಯಂತ ಹತ್ತಿರದ ನಂಟಿರುವುದನ್ನು ಗಮನಿಸಬಹುದು.

ಗಾಂಧೀಜಿ ಪ್ರತಿಪಾದಿಸಿದ ‘ಗ್ರಾಮ ಸ್ವರಾಜ್’, ಆಡಳಿತ ವಿಕೇಂದ್ರೀಕರಣದ ಉತ್ಕೃಷ್ಟ ಉದಾಹರಣೆ. ಪ್ರತಿ ಹಳ್ಳಿ ಸ್ವಯಮಾಡಳಿತ ಕೇಂದ್ರವಾಗಬೇಕೆಂದು ಗಾಂಧೀಜಿ ಬಯಸಿದ್ದರು. ಹಳ್ಳಿ, ತನ್ನೆಲ್ಲಾ ಆಗು–ಹೋಗುಗಳನ್ನು ತಾನೇ ನಿಭಾಯಿಸಬೇಕು ಹಾಗೂ ತನ್ನ ಅಗತ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಾನೇ ಪೂರೈಸಿಕೊಳ್ಳಬೇಕೆಂದು ಗಾಂಧೀಜಿ ಬಯಸಿದ್ದರು. ಬಾಪೂಜಿಯವರ ಈ ಚಿಂತನೆಗೂ, ಇಂದು ನಾವು ಕಾಣುವ ಸ್ವಯಮಾಡಳಿತಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

**ಇತಿಹಾಸ :**

ನಮ್ಮ ದೇಶದಲ್ಲಿ ಸ್ಥಳೀಯ ಸರ್ಕಾರಗಳು ಹಾಗೂ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಒಂದು ಸುಧೀರ್ಘ ಇತಿಹಾಸವಿದೆ. ವೇದಗಳ ಕಾಲದಲ್ಲಿದ್ದ ‘ಸಭಾ’ ವ್ಯವಸ್ಥೆ ಉತ್ತಮ ರೀತಿಯ ಸ್ಥಳೀಯ ಆಡಳಿತವಾಗಿತ್ತೆಂದು ಇತಿಹಾಸ ತಿಳಿಸುತ್ತದೆ. ಮೊಘಲರ ಹಾಗೂ ಬ್ರಿಟಿಷರ ಅವಧಿಯಲ್ಲಿ ಸ್ಥಳೀಯ ಸರ್ಕಾರಗಳು ನಿಷ್ಕ್ರಿಯವಾಗಿ, ಕೆಲ ಜಾತಿಯ ಹಾಗೂ ಉಳ್ಳವರ ಪಾಲಾದುದನ್ನು ಗಮನಿಸಬಹುದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸ್ಥಳೀಯ ಸರ್ಕಾರಗಳು ಸಾಕಷ್ಟು ಬದಲಾವಣೆಗಳನ್ನು ಕಂಡಿವೆ. ಈ ಸರ್ಕಾರಗಳ ಸ್ಥಾಪನೆ, ಪಾಲನೆಯನ್ನು ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಡಲಾಯಿತು. ವಿವಿಧ ಕಾಲಘಟ್ಟಗಳಲ್ಲಿ ರಾಷ್ಟ್ರ ಹಾಗೂ ರಾಜ್ಯಗಳ ಮಟ್ಟದಲ್ಲಿ ಪ್ರಾಜ್ಞರನ್ನೊಳಗೊಂಡ ಸಮಿತಿಗಳು ಸ್ಥಳೀಯ ಸರ್ಕಾರಗಳನ್ನು ಬಲಪಡಿಸುವೆಡೆ ಆಡಳಿತ ಹಸ್ತಾಂತರಕ್ಕೆ ಶಿಫಾರಸು ಮಾಡಿದವು. (ಬಲವಂತರಾಯ್ ಮೆಹ್ತಾ ಸಮಿತಿ– 1957, ವಿ.ಟಿ. ಕೃಷ್ಣಮಾಚಾರಿ ಸಮಿತಿ– 1960, ಅಶೋಕ್ ಮೆಹ್ತಾ ಸಮಿತಿ– 1978, ಜಿ.ವಿ.ಕೆ. ರಾವ್ ಸಮಿತಿ– 1985, ಎಲ್.ಎಂ.ಸಿಂಘ್ವಿ ಸಮಿತಿ– 1986 ಇತ್ಯಾದಿ) ಇದೆಲ್ಲದರ ಫಲಶ್ರುತಿ ಎಂಬಂತೆ, 1992ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿತರಲಾಯ್ತು.

ಈ 73ನೇಯ ತಿದ್ದುಪಡಿಯ ಪ್ರಮುಖ ಆಶಯ ಆಡಳಿತ ವಿಕೇಂದ್ರೀಕರಣ ಹಾಗೂ ಕೆಳಸ್ಥರಗಳಿಗೆ, ಆಡಳಿತ ಹಸ್ತಾಂತರಿಸುವಿಕೆ, ಸ್ಥಳೀಯ ಸರ್ಕಾರಗಳ ಬಲವರ್ಧನೆ ಹಾಗೂ ಜನ ಸಹಭಾಗಿತ್ವಕ್ಕೆ ಒತ್ತುಕೊಟ್ಟು ಈ ತಿದ್ದುಪಡಿ ಹಲವಾರು ಕ್ರಾಂತಿಕಾರಿ ಬದಲಾವಣೆಗಳನ್ನು ಸೂಚಿಸಿದೆ. (ತ್ರಿಸ್ಥರ ಸರ್ಕಾರ ರಚನೆ, ಗ್ರಾಮ ಸಭೆಗೆ ಸಂವಿಧಾನದ ರಕ್ಷಣೆ, ಮೀಸಲಾತಿ, ಹಣಕಾಸು ಹಾಗೂ ಚುನಾವಣಾ ಆಯೋಗಗಳ ರಚನೆ, ಜಿಲ್ಲಾ ಯೋಜನಾ ಘಟಕದ ಸ್ಥಾಪನೆ, ರಾಜ್ಯ ಪಂಚಾಯತ್ ಪರಿಷತ್ ರಚನೆ ಇತ್ಯಾದಿ).



ಶೆಡ್ಯೂಲ್–11ರನ್ವಯ, ಗ್ರಾಮ ಪಂಚಾಯಿತಿಗಳು 29 ವಿಷಯಗಳನ್ನು ಒಟ್ಟು ಅಭಿವೃದ್ಧಿಗಾಗಿ ತೆಗೆದುಕೊಳ್ಳಬಹುದೆಂದು ರಾಜ್ಯಗಳಿಗೆ ತಿದ್ದುಪಡಿ ತಿಳಿಸುತ್ತದೆ. ಸಂವಿಧಾನದ 73ನೇಯ ತಿದ್ದುಪಡಿ ನಿಜ ಅರ್ಥದಲ್ಲಿ ಒಂದು ಕ್ರಾಂತಿಕಾರಿ ನಡೆ.

**ಪ್ರಸಕ್ತ ಸನ್ನಿವೇಶ :**

ರಾಷ್ಟ್ರಾದ್ಯಂತ 73ನೇ ತಿದ್ದುಪಡಿ ಅನುಷ್ಠಾನಗೊಂಡಿದ್ದರೂ, ನಿರೀಕ್ಷಿತ ಪಲಶ್ರುತಿ ಇನ್ನೂ ದೊರೆತಿಲ್ಲ. ಆಡಳಿತ ವಿಕೇಂದ್ರೀಕರಣ ಹಾಗೂ ಸ್ಥಳೀಯ ಸರ್ಕಾರಗಳ ಸಾಧನೆಗಳನ್ನು ಗಮನಿಸುವಾಗ ಕೆಲ ರಾಜ್ಯಗಳಷ್ಟೇ ಉತ್ತಮ ಸ್ಥಿತಿಯಲ್ಲಿರುವುದನ್ನು ಗಮನಿಸಬಹುದು (ಕೇರಳ, ಕರ್ನಾಟಕ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಸಿಕ್ಕಿಂ). ಸರ್ಕಾರದ ಒಂದು ವರದಿಯ ಪ್ರಕಾರ 11ನೇ ಶೆಡ್ಯೂಲ್ ಸೂಚಿಸುವ 29 ವಿಷಯಗಳ ಪ್ರತಿಶತ ವಿಕೇಂದ್ರೀಕರಣ ಯಾವ ರಾಜ್ಯದಲ್ಲೂ ಆಗಿಲ್ಲ. ಇಂದು ದೇಶಾದ್ಯಂತ 6.5 ಲಕ್ಷಹಳ್ಳಿಗಳು, 2.5ಲಕ್ಷ ಗ್ರಾಮ ಪಂಚಾಯತ್‌ಗಳು, ಸುಮಾರು 6000 ತಾಲೂಕು ಪಂಚಾಯತ್‌ಗಳು, 500 ಜಿಲ್ಲಾ ಪಂಚಾಯತ್‌ಗಳು ಇದ್ದು ಸುಮಾರು 30 ಲಕ್ಷ ಚುನಾಯಿತ ಪ್ರತಿನಿಧಿಗಳು ಕಾರ್ಯೋನ್ಮುಖರಾಗಿದ್ದಾರೆ. ಇದಕ್ಕನುಗುಣವಾಗಿ ಅಭಿವೃದ್ಧಿ ಫಲಿತಗಳು ದೊರೆಯುತ್ತಿಲ್ಲ ಎಂಬುದು ವಿಷಾಧನೀಯ.

**ಅಭಿವೃದ್ಧಿಯ ಪರಿಕಲ್ಪನೆ :–**

ಖ್ಯಾತ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್ ಹೇಳುವಂತೆ ‘ಅಭಿವೃದ್ಧಿ ಎಂಬುದು ಜನರ ಆಯ್ಕೆಗಳನ್ನು ವಿಸ್ತರಿಸುವ ಪ್ರಕ್ರಿಯೆ’. ಈ ಪ್ರಕ್ರಿಯೆಯ ಮಾಪನವನ್ನು ‘ಮಾನವ ಅಭಿವೃದ್ಧಿ ಸೂಚ್ಯಂಕ’ಗಳಿಂದ ಮಾಡಲು ಸಾಧ್ಯ. ವಿಶ್ವಸಂಸ್ಥೆಯ ಕೋಷ್ಟಕಕ್ಕನುಗುಣವಾಗಿ ಒಂದು ಪ್ರದೇಶದ/ದೇಶದ ಮಾನವ ಅಭಿವೃದ್ಧಿಯ ಮಟ್ಟವನ್ನು ಅಲ್ಲಿನ ಮೂರು ಸೂಚ್ಯಾಂಕಗಳಿಂದ ಅಳೆಯಲು ಸಾಧ್ಯ (ಅದಾಯ, ಅಕ್ಷರ/ಶಿಕ್ಷಣ ಹಾಗೂ ಆರೋಗ್ಯ/ದೀರ್ಘಾಯುಷ್ಯ).

ಇದಲ್ಲದೇ ಇನ್ನೂ ವಿವಿಧ ಸೂಚ್ಯಾಂಕಗಳ ಬಳಕೆಯಿಂದ ಒಂದು ಪ್ರದೇಶದ ಅಭಿವೃದ್ಧಿಯ ಮಟ್ಟವನ್ನು ಅಳೆಯಲು ಸಾಧ್ಯ. ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಪಂಚಾಯತ್‌ಗಳ ಮಟ್ಟದಲ್ಲೂ ಸೂಚ್ಯಂಕಗಳ ಸಮರ್ಪಕ ಬಳಕೆಯಿಂದ ಅಭಿವೃದ್ಧಿ ಮಾಪನ ಸಾಧ್ಯ. ವರ್ಷ 2008ರಲ್ಲಿ ಉಡುಪಿ ಜಿಲ್ಲೆಯಲ್ಲಿ ಈ ತೆರನಾದ ಕೆಲಸ ನಡೆದಿದೆ. (ಉಡುಪಿ ಜಿಲ್ಲೆ – ಮಾನವ ಅಭಿವೃದ್ಧಿ ವರದಿ–2008). ರಾಜ್ಯ ಮಟ್ಟದಲ್ಲೂ, ತ್ರಿಸ್ಥರಗಳ ಅಭಿವೃದ್ಧಿ ಮಾಪನ ನಡೆದಿದೆ.

ಅಭಿವೃದ್ಧಿ ಮಾಪನದಿಂದ ಅಭಿವೃದ್ಧಿಯಲ್ಲಿ ಸುಧಾರಣೆಯಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಬಹುದು. ರಾಷ್ಟ್ರ ಅಥವಾ ಕರ್ನಾಟಕ ರಾಜ್ಯದ ಅಭಿವೃದ್ಧಿ ಸೂಚ್ಯಂಕಗಳನ್ನು ಗಮನಿಸಿದರೆ, ಬೇರೆ ಬೇರೆ ರಾಜ್ಯಗಳಲ್ಲಿ, ವಿವಿಧ ಜಿಲ್ಲೆಗಳಲ್ಲಿ – ತಾಲೂಕುಗಳಲ್ಲಿ – ಗ್ರಾಮ ಪಂಚಾಯತ್‌ಗಳಲ್ಲಿ ಅಭಿವೃದ್ಧಿಯಲ್ಲಿ ಆಗಾಧ ವ್ಯತ್ಯಾಸವನ್ನು ಕಾಣಬಹುದು. ಪ್ರಾದೇಶಿಕ ವ್ಯತ್ಯಾಸಗಳೇನೇ ಇದ್ದರೂ, ಒಂದೇ ತೆರನಾದ, ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಇರುವಾಗ, ಈ ಮಟ್ಟದ ವ್ಯತ್ಯಾಸಕ್ಕೆ ಕಾರಣಗಳೇನು? ಆಡಳಿತ ವಿಕೇಂದ್ರೀಕರಣದ ಮುಖೇನ, ಸ್ಥಳೀಯ ಸರ್ಕಾಗಳು ಗುಣಮಟ್ಟದ ಕಾರ್ಯವೆಸಗುತ್ತಿರುವ ರಾಜ್ಯಗಳಲ್ಲಿ/ ಜಿಲ್ಲೆಗಳಲ್ಲಿ/ ತಾಲೂಕುಗಳಲ್ಲಿ/ ಗ್ರಾಮ ಪಂಚಾಯತ್‌ಗಳಲ್ಲಿ ಅಭಿವೃದ್ಧಿ ಸೂಚ್ಯಂಕಗಳು ಉತ್ತಮವಾಗಿರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ಸ್ಥಳೀಯ ಆಡಳಿತಕ್ಕೂ ಅಭಿವೃದ್ಧಿಗೂ ನೇರ ಸಂಬಂಧವಿರುವುದನ್ನು ಗಮನಿಸಬಹುದು.

**ಸಮಸ್ಯೆಗಳು :–**

* ತ್ರಿಸ್ಥರ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳನ್ನು ಗುರುತಿಸಬಹುದು.

* ಪ್ರಜಾಪ್ರಭುತ್ವದ ಮುಖ್ಯ ಲಕ್ಷಣವಾದ ‘ಜನಸಹಭಾಗಿತ್ವ’ ಕುಂಠಿತಗೊಳ್ಳುತ್ತಿದೆ. ವಾರ್ಡ್ ಸಭೆ, ಗ್ರಾಮ ಸಭೆಗಳಲ್ಲಿ ಗ್ರಾಮೀಣರು ನಿರೀಕ್ಷಿತ ಮಟ್ಟದಲ್ಲಿ ಪಾಲ್ಗೊಳ್ಳುತ್ತಿಲ್ಲ. ಪಂಚಾಯತ್ ನನ್ನದು ಎಂಬ ಭಾವನೆ ಕ್ಷೀಣಿಸುತ್ತಿದೆ. ಗ್ರಾಮದ ಸಮಸ್ಯೆಗಳ ಚರ್ಚೆ ಜನರ ನಡುವೆ ನಡೆಯುತ್ತಿಲ್ಲ. ಚರ್ಚೆ ಇಲ್ಲದ ಕಾರಣ ನಿರ್ಧಾರಗಳು ತಪ್ಪಾಗುತ್ತಿವೆ. ಇದರಿಂದ ಸಮುದಾಯಕ್ಕೆ ಅದರಲ್ಲೂ ಅಂಚಿನಲ್ಲಿರುವ ವರ್ಗಗಳಿಗೆ ಯೋಜನೆಯ ಲಾಭ ತಲುಪದೇ ಹೋಗುವ ಸಾಧ್ಯತೆಗಳಿವೆ.

* ಜನಪ್ರತಿನಿಧಿಗಳಿಗೂ, ಅಧಿಕಾರಿಗಳಿಗೂ ಇರುವ ಸಂಬಂಧ ಸುಮಧುರವಾಗಿರದೇ, ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿದೆ. ಇದರಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ.

* ಅಧಿಕಾರಶಾಹಿ ‘ಜನಸ್ನೇಹಿ’ಯಾಗಿ ಕೆಲಸ ಮಾಡುವ ಸಂಸ್ಕೃತಿ ನಮ್ಮ ದೇಶದಲ್ಲಿ ಇನ್ನೂ ಆಳವಾಗಿ ಬೇರು ಬಿಟ್ಟಿಲ್ಲ.

* ಉತ್ತಮ ಸೇವೆ ಸಲ್ಲಿಸುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಗುರುತಿಸಿ, ಗೌರವಿಸುವ ಪರಿಪಾಠ ನಮ್ಮಲ್ಲಿಲ್ಲ. ಹಾಗಾಗಿ, ಕೆಲಸ ಮಾಡಿದರೂ, ಮಾಡದಿದ್ದರೂ ಒಂದೇ ಎಂಬ ಸಿನಿಕತನ ಒಡಮೂಡಿದೆ.

* ಉತ್ತರದಾಯಿತ್ವ ಖಚಿತ ಪಡಿಸುವ ತಂತ್ರ/ವಿಧಾನಗಳ ಕೊರತೆ ಕಂಡುಬರುತ್ತದೆ.

* ಸಂಸ್ಥೆಗಳಿಗೆ ಅಗತ್ಯವಿರುವ ಹಣಕಾಸು, ನುರಿತ ಸಿಬ್ಬಂದಿ ಇನ್ನಿತರ ಸೌಲಭ್ಯಗಳ ಕೊರತೆ ಹಲವೆಡೆ ಎದ್ದುಕಾಣುತ್ತದೆ.

* ಸ್ಥಳೀಯ ಸರ್ಕಾರಗಳಲ್ಲಿ ಇರಲೇ ಬೇಕಾದ ಕರ್ತವ್ಯ ಪ್ರಜ್ಞೆ ಕಾಣದಾಗುತ್ತಿದೆ.

* ಸಾಂಸ್ಥಿಕ ಜಡತ್ವ ಪೌರ ಜಡತ್ವದೊಡನೆ ಸಮ್ಮಿಳಿತಗೊಂಡು ಸಮಸ್ಯೆ ಇನ್ನಷ್ಟು ಜಟಿಲಗೊಂಡಿದೆ.

**ಉಪಸಂಹಾರ :–**

ಯಾವುದೇ ಸರ್ಕಾರದ ಅಂತಿಮ ಉದ್ದೇಶ ಸಮುದಾಯದ ಮಾನವ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯ ಒದಗಣೆ. ಸ್ಥಳೀಯ ಸರ್ಕಾರಗಳ ಪರಮ ಉದ್ದೇಶವೂ ಇದೇ ಆಗಿದೆ. ಆಧುನೀಕರಣ, ಬದಲಾದ ಜೀವನ ಶೈಲಿ ಹಾಗೂ ನಗರೀಕರಣಗಳ ಸೆಳೆತಕ್ಕೆ ಒಳಗಾದ ಗ್ರಾಮೀಣ ಸಮುದಾಯವನ್ನು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಅವರನ್ನು ಅಭಿವೃದ್ಧಿ ಪಾಲುದಾರರನ್ನಾಗಿ ಮಾಡಬೇಕಾಗಿದೆ. ಇದು ಸುಲಭ ಸಾಧ್ಯವಲ್ಲ. ಈ ಹಿಂದೆ ಚಾಲ್ತಿಯಲ್ಲಿದ್ದ ಭೂದಾನ, ಶ್ರಮದಾನ, ಚಂದಾವಸೂಲಿಗೆ ಮುಂತಾದ ಸಮಾಜಮುಖಿ ಕಾಯಕಗಳಲ್ಲಿ ಉಳ್ಳವರು ಪಾಲ್ಗೊಳ್ಳುವಂತಾಗಬೇಕು. ಉಳಿದವರು, ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ತಮ್ಮ ವಿಚಾರ ಹಾಗೂ ಪಾಲ್ಗೊಳ್ಳುವಿಕೆಯಿಂದ ಸೇವೆ ಸಲ್ಲಿಸುವುದು ಅಗತ್ಯ.

ಈ ಎಲ್ಲಾ ಸವಾಲುಗಳನ್ನು ಸಂಬಂಧಿತರೆಲ್ಲರೂ ಸ್ವೀಕರಿಸಿ, ಶ್ರಮವಹಿಸಿ ದುಡಿದಾಗ, ಸಂವಿಧಾನದ 73ನೇ ತಿದ್ದುಪಡಿಗೆ ಗೌರವ ಸಲ್ಲಿಸಿದಂತಾಗುತ್ತದೆ.

---

1ನೇ ಪುಟದಿಂದ..............

## ಗ್ರಾಮ ಸ್ವರಾಜ್ ಕಾಯಿದೆ

ಬದಿಗೊತ್ತಲ್ಪಟ್ಟ/ಅಸುರಕ್ಷಿತ ವರ್ಗದ ಜನರಿಗೆ ಸಶಕ್ತತೆಯತ್ತ ಸಾಗಲು ದಾರಿಯಾಗಿದೆ.

ಪ್ರತಿಯೊಂದು ಮಗುವಿನ ಅಗತ್ಯತೆಗಳು ವಿಶೇಷ. ಅವರನ್ನು ವೈಯಕ್ತಿಕವಾಗಿ ಗಮನಿಸಿ ಅವರ ಪರಿಸ್ಥಿತಿಯನ್ನು ಕೂಲಂಕುಶವಾಗಿ ಅರ್ಥ ಮಾಡಿಕೊಂಡಾಗ ಮಾತ್ರ ಅವರಿಗೆ ಸೂಕ್ತವಾದ ರೀತಿಯಲ್ಲಿ ಸ್ಪಂದಿಸಲು, ಅವರ ಸಮಸ್ಯೆಗೆ ಪರಿಹಾರ ನೀಡಲು ಮತ್ತು ಅವರ ಬೆಳವಣಿಗೆಗೆ ಸೌಕರ್ಯಗಳನ್ನು ಒದಗಿಸಲು ಸಾಧ್ಯ. ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಈ ಮಟ್ಟದ ಸೂಕ್ಷ್ಮತೆಯಿಂದ ಮಕ್ಕಳೊಂದಿಗೆ ನಿಕಟ ಸಂಬಂಧ ಕಲ್ಪಿಸಿಕೊಳ್ಳುವುದು ಕೇವಲ ಗ್ರಾಮ ಪಂಚಾಯತ್ ಸರ್ಕಾರಕ್ಕೆ ಮಾತ್ರ ಸಾಧ್ಯ. ಕೇವಲ ವೈಯಕ್ತಿಕವಾಗಿ ಮಾತ್ರವಲ್ಲ, ಬೇರೆ ಬೇರೆ ಭೌಗೋಳಿಕ ಸಮಸ್ಯೆಗಳು, ಉದಾಹರಣೆಗೆ ಬರ, ನೆರೆ, ಮುಳುಗಡೆ ಇಂತಹವುಗಳನ್ನು ಅನುಭವಿಸುವ ಮಕ್ಕಳಿಗೆ ಅಗತ್ಯ ನೆರವು, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವ ಬುಡಕಟ್ಟು ಜನಾಂಗದವರು, ಹದಿಹರೆಯದ ಮಕ್ಕಳ ಅಗತ್ಯತೆಗಳನ್ನು ಗಮನಿಸುವುದು, ಇವರಿಗೆ ಅಗತ್ಯವಿರುವ ಶಾಲೆ, ಅಂಗನವಾಡಿ, ಗ್ರಂಥಾಲಯ ಮುಂತಾದ ವ್ಯವಸ್ಥೆಗಳ ಮೇಲ್ವಿಚಾರಣೆ ಮಾಡುವುದು – ಇವೆಲ್ಲವೂ ಗ್ರಾಮ ಪಂಚಾಯತ್‌ನ ಜವಾಬ್ದಾರಿ ಹಾಗೂ ಅಧಿಕಾರ. ಆದರೆ ಇಂತಹ ಜವಾಬ್ದಾರಿಯನ್ನು ಸಮಗ್ರವಾಗಿ, ಪರಿಣಾಮಕಾರಿಯಾಗಿ ನಿಭಾಯಿಸಬೇಕೆಂದರೆ ಕಾರ್ಯದೊಂದಿಗೆ, ಕಾರ್ಯನಿರ್ವಾಹಕರು ಮತ್ತು ಹಣಕಾಸು ಸ್ಥಳೀಯ ಸರ್ಕಾರಗಳಿಗೆ ವರ್ಗಾವಣೆಯಾದಾಗ ಮಾತ್ರ ಸಾಧ್ಯ.

ಈಗ ಜಾರಿಯಲ್ಲಿರುವ ಗ್ರಾಮ ಸ್ವರಾಜ್ ಕಾಯಿದೆ ಪ್ರತಿಯೊಂದು ಮಗುವಿಗೂ ತಲುಪಬೇಕಾದರೆ ಅದರ ಸಮಗ್ರ ಹಾಗೂ ಪರಿಣಾಮಕಾರಿ ಅನುಷ್ಠಾನ ಆಗಲೇಬೇಕಾಗುತ್ತದೆ. ಸಂವಿಧಾನದ 73ನೇ ತಿದ್ದುಪಡಿಯ ರೂಪಿತವಾಗುವ ಸಂದರ್ಭದಲ್ಲಿ ಜನರ ಭಾಗವಹಿಸುವಿಕೆಯನ್ನು ಎತ್ತಿ ಹಿಡಿಯುವಾಗ ಆ ಪಟ್ಟಿಯಲ್ಲಿ ಮಕ್ಕಳನ್ನು ವಿಶೇಷವಾಗಿ ಪರಿಗಣಿಸಿರಲಿಲ್ಲ. ನಮ್ಮ ಗ್ರಾಮ ಸ್ವರಾಜ್ ಕಾಯಿದೆ ಒಂದು ಹೆಜ್ಜೆ ಮುಂದೆ ಹೋಗಿ ಗ್ರಾಮ ಪಂಚಾಯತ್‌ಗಳಿಗೆ, ಎಲ್ಲಾ ಸ್ಥಳೀಯ ಸರ್ಕಾರಗಳಿಗೆ ಮಕ್ಕಳಿಗೆ ಬದ್ಧತೆ ಮತ್ತು ಉತ್ತರದಾಯಿತ್ವ ಇದೆ ಎಂದು ಸಾರಿ ಹೇಳುತ್ತಿದೆ. ನಮ್ಮ ಇಂದಿನ ಮಕ್ಕಳು ಇಂದಿನ ಪ್ರಜೆಗಳಾಗಿ ಮುಂದಿನ ವಯಸ್ಕ ನಾಗರಿಕರಾಗಿ ತಲೆ ಎತ್ತಿ ನಡೆಯಲು ಗ್ರಾಮ ಸ್ವರಾಜ್ ಕಾಯಿದೆ ಮೊದಲ ಮೆಟ್ಟಲಾಗಲಿ, ಮುಂದಿನ ದಾರಿ ತೋರುವ ದಾರಿದೀಪವಾಗಲಿ.